# ಶ್ರೀರಾಮಕೃಷ್ಣರಿಗೆ ಕ್ರಿಸ್ತನ ದರ್ಶನವಾದಾಗ...



ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ವಿವಿಧ ಸಾಧನಮಾರ್ಗಗಳನ್ನು ಅನುಸರಿಸಿ ಜಗನ್ಮಾತೆಯನ್ನು ಕಾಣುವ ಬಯಕೆಯಾಯಿತು. ಆಗ ಅವರಿಗೆ ಶಂಭು ಮಲ್ಲಿಕನ ಪರಿಚಯವಾಗಿತ್ತು (ಶಂಭು ಚರಣ ಮಲ್ಲಿಕ ಕಲ್ಕತ್ತೆಯ ದೊಡ್ಡ ಶ್ರೀಮಂತ. ಶ್ರೀರಾಮಕೃಷ್ಣರಿಗೆ ಬೇಕಾದ ವಸ್ತುಗಳನ್ನು ಒದಗಿಸಿ ಅವರ ಅಗತ್ಯಗಳನ್ನು ಪೂರೈಸುತ್ತಿದ್ದ. ದಕ್ಷಿಣೇಶ್ವರದ ಕಾಳೀ ಮಂದಿರದ ಬಳಿಯಲ್ಲಿಯೇ ಈತನ ಒಂದು ತೋಟವಿತ್ತು. ಶಂಭುಚರಣ ಮಲ್ಲಿಕ ಹಾಗೂ ಆತನ ಧರ್ಮಪತ್ನಿ ಇಬ್ಬರೂ ಶ್ರೀರಾಮಕೃಷ್ಣರಲ್ಲಿ ಮತ್ತು ಶ್ರೀಮಾತೆಯವರಲ್ಲಿ ಅಪಾರ ಶ್ರದ್ಧಾಭಕ್ತಿಯುಳ್ಳವರಾಗಿದ್ದರು). ಒಮ್ಮೆ ಶಂಭುಚರಣನು ಬೈಬಲ್ ಓದುವುದನ್ನು ಕೇಳಿ, ಕ್ರಿಸ್ತನ ಪವಿತ್ರ ಜೀವನ ಮತ್ತು ಅವನು ಸ್ಥಾಪಿಸಿದ ಧರ್ಮ—ಇವುಗಳ ಮಾಹಿತಿಯನ್ನು ಪಡೆದಾಗ ಶ್ರೀರಾಮಕೃಷ್ಣರಿಗೆ ಕ್ರೈಸ್ತ ಧರ್ಮದ ಸಾಧನೆಯನ್ನು ಮಾಡಬೇಕೆನಿಸಿತು. ಕೂಡಲೇ ಜಗನ್ಮಾತೆ ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿದಳು. ದಕ್ಷಿಣೇಶ್ವರದ ಕಾಳೀಮಂದಿರದ ದಕ್ಷಿಣಭಾಗಕ್ಕೆ ಯದುನಾಥ ಮಲ್ಲಿಕನ ತೋಟದ ಮನೆಯಿತ್ತು. ಶ್ರೀರಾಮಕೃಷ್ಣರು ಆಗಾಗ ಅಲ್ಲಿಗೆ ವಾಯುವಿಹಾರಕ್ಕಾಗಿ ಹೋಗಿಬರುತ್ತಿದ್ದರು. ಯದುನಾಥ ಮತ್ತು ಆತನ ತಾಯಿಗೆ ಶ್ರೀರಾಮಕೃಷ್ಣರನ್ನು ನೋಡಿದಂದಿನಿಂದಲೂ ಅವರ ಮೇಲೆ ತುಂಬ ಶ್ರದ್ಧಾಭಕ್ತಿಯಿತ್ತು. ಅವರಿಬ್ಬರು ಮನೆಯಲ್ಲಿ ಇಲ್ಲದಿದ್ದರೂ ಅಲ್ಲಿಯ ಕೆಲಸಗಾರರು ಶ್ರೀರಾಮಕೃಷ್ಣರು ಅಲ್ಲಿ ಓಡಾಡುವಂತೆ ಮತ್ತು ಅಲ್ಲಿಯ ಬೈಠಕ್‌ಖಾನೆಯಲ್ಲಿ ಕುಳಿತು ವಿಶ್ರಮಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು.

ಅಲ್ಲಿಯ ಬೈಠಕ್‌ಖಾನೆಯಲ್ಲಿ ಅನೇಕ ಒಳ್ಳೆಯ ಚಿತ್ರಗಳಿದ್ದುವು. ತಾಯಿಯ ಮಡಿಲಿನಲ್ಲಿ ಕುಳಿತಿರುವ ಬಾಲಕ್ರಿಸ್ತನ ಚಿತ್ರವೂ ಅವುಗಳಲ್ಲಿ ಒಂದು. ಒಂದು ದಿನ ಶ್ರೀರಾಮಕೃಷ್ಣರು ಆ ಚಿತ್ರವನ್ನು ತನ್ಮಯರಾಗಿ ನೋಡುತ್ತಿದ್ದರು ಮತ್ತು ಕ್ರಿಸ್ತನ ಅದ್ಭುತ ಜೀವನಕಥೆಯನ್ನು ಸ್ಮರಿಸಿಕೊಳ್ಳುತ್ತಿದ್ದರು. ನೋಡುತ್ತಿದ್ದಂತೆಯೇ ಆ ಚಿತ್ರವು ಜೀವಂತವಾಗಿ ಜ್ಯೋತಿರ್ಮಯವಾಗಿ ಕಾಣತೊಡಗಿತು. ದೇವಮಾತೆ ಮತ್ತು ದೇವಶಿಶುವಿನ ಅಂಗದಿಂದ ಜ್ಯೋತಿಕಿರಣಗಳು ಹೊರಬಂದು ಇವರ ದೇಹವನ್ನು ಪ್ರವೇಶಿಸಿ, ಇವರ ಆಂತರ್ಯದಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ಉಂಟುಮಾಡತೊಡಗಿದವು. ಜನ್ಮಗತ ಹಿಂದೂ ಸಂಸ್ಕಾರಗಳೆಲ್ಲ ಯಾವುದೋ ಮೂಲೆಯಲ್ಲಿ ಅಡಗಿದುವು ಮತ್ತು ಹೊಸ ಸಂಸ್ಕಾರಗಳು ಉದಯವಾಗತೊಡಗಿದವು. ಅವರು ಕಾತರತೆಯಿಂದ ಜಗನ್ಮಾತೆಯನ್ನು ಕೇಳಿದರು, "ತಾಯಿ, ನನಗೆ ಇದೇನು ಮಾಡುತ್ತಿರುವೆ?" ಎಂದು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ.

ಆ ಸಂಸ್ಕಾರ ತರಂಗಗಳು ಪ್ರಬಲವಾದ ವೇಗದಿಂದ ಬಂದು ಅವರ ಹಿಂದೂ ಸಂಸ್ಕಾರಗಳನ್ನೆಲ್ಲ ಮೂಲೆಗೆ ತಳ್ಳಿದುವು. ಆಗ ದೇವದೇವಿಯರ ಮೇಲಿನ ಪ್ರೀತಿಯೆಲ್ಲ ಹೊರಟುಹೋಯಿತು. ಕ್ರಿಸ್ತ ಮತ್ತು ಕ್ರೈಸ್ತ ಧರ್ಮದಲ್ಲಿ ಪೂರ್ಣ ಶ್ರದ್ಧೆ ಮತ್ತು ವಿಶ್ವಾಸ ಅವರ ಮನೋರಾಜ್ಯವನ್ನು ಆಕ್ರಮಿಸಿಕೊಂಡವು. ಕ್ರೈಸ್ತ ಪಾದ್ರಿಗಳು ಚರ್ಚಿನಲ್ಲಿ ಕ್ರಿಸ್ತ ವಿಗ್ರಹದ ಮುಂದೆ ಧೂಪ ದೀಪಗಳನ್ನು ಬೆಳಗುವುದು, ಕ್ರಿಸ್ತನನ್ನು ಪ್ರಾರ್ಥಿಸುವುದು—ಇವೇ ಮುಂತಾದ ದೃಶ್ಯಗಳು ಅವರಿಗೆ ಕಾಣತೊಡಗಿದುವು.

ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದು ಇದೇ ವಿಷಯಗಳನ್ನೇ ಧ್ಯಾನಿಸತೊಡಗಿದರು. ಕಾಳೀಮಂದಿರಕ್ಕೆ ಹೋಗುವ ವಿಷಯವೇ ಅವರಿಗೆ ಮರೆತುಹೋಯಿತು. ಮೂರು ದಿನಗಳವರೆಗೆ ಈ ಭಾವತರಂಗವು ಅವರ ಮನಸ್ಸನ್ನು ವ್ಯಾಪಿಸಿಕೊಂಡಿತ್ತು.

ಮೂರನೆಯ ದಿನದ ಕೊನೆಯಲ್ಲಿ ಶ್ರೀರಾಮಕೃಷ್ಣರು ಪಂಚವಟಿಯಲ್ಲಿ ಓಡಾಡುತ್ತಿರುವಾಗ ಒಂದು ಅದ್ಭುತ ದೃಶ್ಯವನ್ನು ಕಂಡರು. ಸುಂದರ ದಿವ್ಯಪುರುಷನೊಬ್ಬನು ನೆಟ್ಟ ದೃಷ್ಟಿಯಿಂದ ಇವರನ್ನೇ ನೋಡುತ್ತ ಇವರ ಕಡೆ ಗಂಭೀರವಾಗಿ ನಡೆದು ಬರುತ್ತಿದ್ದ. ಇವರಿಗೆ ಕೂಡಲೇ ತಿಳಿಯಿತು ಅವನು ವಿದೇಶೀಯ ಎಂದು. ಕಣ್ಣುಗಳು ವಿಶಾಲವಾಗಿದ್ದುವು. ಮೈಬಣ್ಣ ಬಿಳುಪು, ಮುಖದಲ್ಲಿ ಅಪೂರ್ವ ಶೋಭೆಯಿತ್ತು, ಮೂಗು ಸ್ವಲ್ಪ ಚಪ್ಪಟೆಯಾದರೂ ಅದರಿಂದ ಅವನ ಸೌಂದರ್ಯಕ್ಕೆ ಸ್ವಲ್ಪವೂ ಹಾನಿಯಾಗಿರಲಿಲ್ಲ. ಅವನ ಅತ್ಯಂತ ಸೌಮ್ಯ ಮುಖಮಂಡಲವನ್ನು ನೋಡಿ ಶ್ರೀರಾಮಕೃಷ್ಣರು ಮುಗ್ಧರಾದರು. ಆಶ್ಚರ್ಯದಿಂದ ಇವರಾರು ಎಂದು ಭಾವಿಸುತ್ತಿದ್ದಂತೆಯೇ ಆ ದಿವ್ಯಮೂರ್ತಿ ಅವರ ಹತ್ತಿರ ಬಂದಿತು. ಆಗ ಶ್ರೀರಾಮಕೃಷ್ಣರ ಒಳದನಿ ಹೇಳಿತು: "ಇವನೇ ಯೇಸುಕ್ರಿಸ್ತ—ಜೀವಿಗಳನ್ನು ದುಃಖ ಯಾತನೆಯಿಂದ ಮುಕ್ತಗೊಳಿಸಲು ಹೃದಯದ ನೆತ್ತರನ್ನು ಸುರಿಸಿದವನು, ಮಾನವನ ಕೈಯಿಂದ ಅಸಾಧ್ಯ ಯಾತನೆಯನ್ನು ಅನುಭವಿಸಿದವನು. ಇವನೇ ಆ ಯೋಗಿವರ, ಭಕ್ತ ಯೇಸುಕ್ರಿಸ್ತ". ಅನಂತರ ಕ್ರಿಸ್ತನು ಶ್ರೀರಾಮಕೃಷ್ಣರನ್ನು ಆಲಿಂಗಿಸಿ ಅವರಲ್ಲಿ ಲೀನವಾದನು. ಶ್ರೀರಾಮಕೃಷ್ಣರು ಭಾವಸಮಾಧಿಯನ್ನು ಪಡೆದರು. ಹೀಗೆ ಕ್ರಿಸ್ತನ ದರ್ಶನವನ್ನು ಪಡೆದು ಅವನು ಅವತಾರಪುರುಷನೆಂಬುದನ್ನು ಸಾಬೀತು ಪಡಿಸಿದರು. ✪